ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

**ಕರ್ನಾಟಕ ವಿಧಾನ ಪರಿಷತ್ತು**

ನೂರ ನಲವತ್ತೆರಡನೆಯ ಅಧಿವೇಶನ

ಬುಧವಾರ, ದಿನಾಂಕ: 09ನೇ ಡಿಸೆಂಬರ್, 2020

ಪ್ರಧಾನ್ ಮಂತ್ರಿ ಆವಾಸ್ ಯೋಜನೆ (ಪಿಎಂಎವೈ) ಅಡಿಯಲ್ಲಿ ವಸತಿ ನಿರ್ಮಾಣ

ಶ್ರೀ ಕೆ.ಎ. ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು):-

240 (288) ಮಾನ್ಯ ವಸತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಪ್ರಧಾನ್ ಮಂತ್ರಿ ಆವಾಸ್ ಯೋಜನೆ (ಪಿಎಂಎವೈ) ಯಡಿಯಲ್ಲಿ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ನಿರ್ಮಿಸಲಾಗುತ್ತಿರುವ ಪ್ರತಿ ವಸತಿ ಘಟಕ ನಿರ್ಮಾಣದ ವೆಚ್ಚವೆಷ್ಟು;

(ಆ) ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿನ ನಿರ್ಮಾಣದ ವೆಚ್ಚವು ವಿಭಿನ್ನವಾಗಿದೆಯೇ; ಹಾಗಿದ್ದಲ್ಲಿ, ಎರಡೂ ಪ್ರದೇಶಗಳಿಗೆ ಹಂಚಿಕೆಯನ್ನು ಸಮನಾಗಿಸಲು ಯಾವುದೇ ಯೋಜನೆಯನ್ನು ರೂಪಿಸಲಾಗಿದೆಯೇ;

(ಇ) ಉಭಯ ಪ್ರದೇಶಗಳ ನಿರ್ಮಾಣ ಸಾಮಾಗ್ರಿಗಳನ್ನು ಒಂದೇ ಸ್ಥಳದಿಂದ ತರುವುದರಿಂದ ಎರಡೂ ಪ್ರದೇಶಗಳ ಯೋಜಿತ ವೆಚ್ಚವನ್ನು ಅದೇ ನಿಯತಾಂಕಗಳಲ್ಲಿ ಅಳೆಯುವುದು ಸಾಧುವಾಗಿದ್ದು, ಈ ಬಗ್ಗೆ ಸರ್ಕಾರ ಪರಶೀಲಿಸುವುದೇ? (ವಿವರ ಒದಗಿಸುವುದು)